ಶ್ರೀ ಶ್ರೀನಿವಾಸಗೌಡ ಕೆ. (ಕೃಷಿ ಸಚಿವರು)

ಅ) ಕೃಷಿ ಇಲಾಖೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೃಷಿ ಅಧಿಕಾರಿಗಳ ಹುದ್ದೆಗಳು ಖಾಲಿ ಇದ್ದು, ಸದರಿ ಕೃಷಿ ಹುದ್ದೆಗಳನ್ನು ಬಡ್ತಿಯಿಂದ ಹಾಗೂ ನೇರ ನೇಮಕಾತಿಯಿಂದ ತುಂಬಲು ಕ್ರಮ ಕೈಗೊಂಡ ನಂತರ ಭಟ್ಕಳ ಮತ್ತು ಹೊನ್ನಾವರ ತಾಲ್ಲೂಕಿನ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಖಾಲಿ ಇರುವ ಕೃಷಿ ಅಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು, ಈ ಎರಡೂ ತಾಲ್ಲೂಕುಗಳಲ್ಲಿ ಕೃಷಿ ಸಹಾಯಕರ ಹುದ್ದೆಗಳು ಭರ್ತಿ ಮಾಡಲಾಗಿದ್ದು, ಹುದ್ದೆಗಳು ಖಾಲಿ ಇರುವುದಿಲ್ಲ.

ಅರಣ್ಯ ಇಲಾಖೆಯಲ್ಲಿ ಫಾರೆಸ್ಟರ್ ಹುದ್ದೆಗಳು ಮತ್ತು ತೋಟಗಾರಿಕೆ ಇಲಾಖೆಯಲ್ಲಿ ತೋಟಗಾರಿಕೆ ಸಹಾಯಕರ ಹುದ್ದೆಗಳು ಖಾಲಿ ಇರುವುದರಿಂದ ಸದರಿ ಹುದ್ದೆಗಳನ್ನು ಈ ಎರಡೂ ತಾಲ್ಲೂಕುಗಳ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಭರ್ತಿ ಮಾಡಲು ಸಾಧ್ಯವಾಗಿರುವುದಿಲ್ಲ. ಅರಣ್ಯ ಹಾಗೂ ತೋಟಗಾರಿಕೆ ಇಲಾಖೆಗಳು ಫಾರೆಸ್ಟರ್ ಹಾಗೂ ತೋಟಗಾರಿಕೆ ಸಹಾಯಕರ ಹುದ್ದೆಗಳನ್ನು ನೇಮಕಾತಿ ಮಾಡಿಕೊಂಡು ಜಲಾನಯನ ಅಭಿವೃದ್ಧಿ ಇಲಾಖೆಗೆ ನಿಯೋಜಿಸಿದ ನಂತರ ಈ ಎರಡೂ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಆ) ಹಾಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಹಾಯದಿಂದ ಯಾವುದೇ ರೀತಿಯಲ್ಲಿ ಕುಂಠಿತವಾಗದಂತೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ.

ಇ) ಅವಶ್ಯಕತೆಗೆ ಅನುಗುಣವಾಗಿ ಖಾಲಿ ಹುದ್ದೆಗಳನ್ನು ಕಾಲಕಾಲಕ್ಕೆ ಭರ್ತಿ ಮಾಡಲಾಗುವುದು.

ಈ) ಹೌದು. ಇಲ್ಲ. ಇಲ್ಲ

ಉ) ಹೊಸದಾಗಿ ರಚಿತವಾದ ಜಿಲ್ಲೆಗಳನ್ನು ಹೊರತುಪಡಿಸಿ, ಪ್ರತಿ ಜಿಲ್ಲೆಯಲ್ಲೂ ಒಂದು ಮಣ್ಣು ಪರೀಕ್ಷಾ ಕೇಂದ್ರ ಮಂಜೂರಾಗಿದ್ದು, ಹೊನ್ನಾವರದಲ್ಲಿ ಪ್ರಾರಂಭಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

623(122) ಶ್ರೀ ಶಿವಾನಂದ ನಾಯಕ್ (ಭಟ್ಕಳ ಕ್ಷೇತ್ರ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗ್ರಾಮಾಂತರ ಪ್ರದೇಶಗಳಲ್ಲಿ ಗ್ಯಾಸ್ (ಎಲ್.ಪಿ.ಜಿ.) ಸೌಲಭ್ಯ ಹೊಂದಿರುವವರಿಗೆ ಸರ್ಕಾರ ಪಡಿತರ ಕಾರ್ಡ್ ಮೂಲಕ ಸೀಮೆ ಎಣ್ಣೆ ಒದಗಿಸಲಾಗುತ್ತಿದೆಯೇ;

ಆ) ಒದಗಿಸುವುದಾದಲ್ಲಿ ಪ್ರತಿ ಕಾರ್ಡ್‌ದಾರರಿಗೆ ಎಷ್ಟು ಪ್ರಮಾಣದ ಸೀಮೆಎಣ್ಣೆ ವಿತರಿಸಲಾಗುತ್ತಿದೆ

ಇ) ಇಲ್ಲದಿದ್ದಲ್ಲಿ ಕಾರಣಗಳೇನು;

ಈ) ಸಮರ್ಪಕವಾಗಿ ಎಲ್ಲಾ ಫಲಾನುಭವಿಗಳಿಗೂ ಸೀಮೆಎಣ್ಣೆ ಸಿಗುತ್ತಿದೆಯೇ?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಇಲ್ಲ.

ಆ) ಅನ್ವಯಿಸುವುದಿಲ್ಲ

ಇ) ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಿಡುಗಡೆಯಾಗುತ್ತಿರುವ ಸೀಮೆಎಣ್ಣೆ ಪ್ರಮಾಣವು ಅನಿಲ ರಹಿತ ಪಡಿತರ ಚೀಟಿದಾರರಿಗೆ ಸಾಕಾಗುತ್ತಿಲ್ಲವಾದುದರಿಂದ ಅನಿಲ ಸೌಲಭ್ಯ ಹೊಂದಿರುವವರಿಗೆ ಸೀಮೆಎಣ್ಣೆ ಹಂಚಿಕೆ ನೀಡುತ್ತಿರುವುದಿಲ್ಲ.

ಈ) ಎಲ್ಲಾ ಅರ್ಹ ಫಲಾನುಭವಿಗಳಿಗೆ ದೊರೆಯುತ್ತಿದೆ.

624(1223) ಶ್ರೀ ಶಿವಾನಂದ ನಾಯಕ್ (ಭಟ್ಕಳ ಕ್ಷೇತ್ರ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷಿ ಮಾರುಕಟ್ಟೆ ಇಲಾಖೆಯಲ್ಲಿ ಅಮಾಲ್ಗಮೇಷನ್ ಆದೇಶದಿಂದ ಶೇ. 60ರಷ್ಟು ಬೆರಳಚ್ಚುಗಾರರು, ಶೇ. 50ರಷ್ಟು ಮಾರುಕಟ್ಟೆ ಸಮಿತಿಯ ದ್ವಿತೀಯ ಚರ್ಜೆ ಸಹಾಯಕರು ಬಡ್ತಿ ಪಡೆದ ಕಾರಣ ಇಲಾಖಾ ದ್ವಿತೀಯ ದರ್ಜೆ ಸಹಾಯಕರು ಶೇ. 100ರಷ್ಟು ಬಡ್ತಿ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಅಮಾಲ್ಗಮೇಷನ್ ಅಧಿಸೂಚನೆ ಸಂ: ಎಫ್‌ಡಿ ಎಸ್‌ಆರ್‌ಪಿ 94, ದಿನಾಂಕ 28–3–94ರ ಅನ್ವಯ ಬಡ್ತಿ ವಂಚಿತ ಇಲಾಖಾ ದ್ವಿತೀಯ ದರ್ಜೆ ಸಹಾಯಕರಿಗೆ ನ್ಯಾಯ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು

ಇ) ವೃಂದ ಮತ್ತು ನೇಮಕಾತಿ ನಿಯಮ ಅಳವಡಿಸಿಕೊಳ್ಳದೆ ಬಡ್ತಿ ನೀಡಲು ಇಲಾಖೆ ಕ್ರಮ ಕೈಗೊಳ್ಳುತ್ತಿರುವುದು ನಿಜವೇ;

ಇ) ಇದು ನಿಯಮಬಾಹಿರವಲ್ಲವೇ;

ಉ) ಈ ಬಗ್ಗೆ ಸರ್ಕಾರದ ಕ್ರಮಗಳೇನು; ಮಾಹಿತಿ ಒದಗಿಸುವುದು?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಸರ್ಕಾರದ ಅಧಿಸೂಚನೆ ಸಂ: ಸಿಎಂಡಬ್ಲ್ಯೂ 171 ಇಎಂಡಿ 95, ದಿನಾಂಕ 4–6–96ರಂತೆ ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಇಲಾಖೆ ಸೇವೆ (ಸಂಯೋಜನೆ) ನಿಯಮಾವಳಿ 1996ನ್ನು ರಚಿಸಲಾಗಿದ್ದು, ದಿನಾಂಕ 27–6–95 ರಿಂದ ಆಸ್ತಿತ್ವಕ್ಕೆ ಬಂದಿರುತ್ತದೆ. ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಇಲಾಖೆ ಸೇವೆ (ಸಂಯೋಜನೆ) ನಿಯಮಾವಳಿ 1966ರ ನಿಯಮ 4ರನ್ವಯ ಒಂದುಗೂಡಿಸಿ 2 ಸೇವೆಗಳ ಸಂಯಜಿತ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ 14–9–97ರಲ್ಲಿ ಪ್ರಕಟಿಸಲಾಗಿರುತ್ತದೆ. ಈ ರೀತಿ ಪ್ರಕಟಗೊಂಡ ಸೇವಾ ಹಿರಿತನದ ಆಧಾರದ ಮೇಲೆ ಪ್ರಸ್ತುತ ಜಾರಿಯಲ್ಲಿರುವ ಸರ್ಕಾರದ ಕಾರ್ಯಕಾರಿ ಆದೇಶದನ್ವಯ ಶೇ. 1:1ರ ಅನುಪಾತದಲ್ಲಿ ದ್ವಿತೀಯ